ಬರಲಾರದ ರೀತಿಯಲ್ಲಿ ಇದನ್ನು ತಿಳಿಸಬೇಕು ಎಂದು ವಿನಂತಿ ಮಾಡಿಕೊಂಡು ಈಗ ಸಭೆಯನ್ನು ಒಂದು ಗಂಟೆ ಕಾಲ ಮುಂದೆ ಹಾಕುತ್ತೇನೆ. ಪುನಃ ನಾವು 3-00 ಗಂಟೆಗೆ ಸಮಾವೇಶಗೊಳ್ಳೋಣ. ಎಲ್ಲಾ ಮಾನ್ಯ ಸದಸ್ಯರೂ ದಯಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರು ಊಟಕ್ಕೆ ವ್ಯವಸ್ಥೆ ಮಾಡಿದ್ದಾರೆ. ಎಲ್ಲರೂ ಬರಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

(ಸದನವು 2-01ಕ್ಕೆ ಮುಕ್ತಾಯಗೊಂಡು ಮತ್ತೆ 3-00 ಗಂಟೆಗೆ ಸಮಾವೇಶಗೊಳ್ಳುವುದು.)

ಸದನವು 3.00 ನಿಮಿಷಕ್ಕೆ ಪ್ರಾರಂಭವಾಯಿತು.

(ಸನ್ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್)ರವರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಕಾಮಗಾರಿಗಳ ಬಗ್ಗೆ ಕ್ಷೇತ್ರಾವಾರು ಪಟ್ಟಿ.

ಶ್ರೀ ವಸಂತ್ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಬಾರ್ಡ್, ಏಶಿಯನ್ ಬ್ಯಾಂಕ್ ಮತ್ತು ವಿಶ್ವಬ್ಯಾಂಕ್ ಇವುಗಳ ಆರ್ಥಿಕ ಸಹಾಯದಿಂದ ಕೈಗೊಳ್ಳುತ್ತಿದ್ದ ಕಾಮಗಾರಿಗಳ ಬಗ್ಗೆಕ್ಷೇತ್ರವಾರು ಪಟ್ಟಿಯನ್ನು ಒದಗಿಸಿಕೊಡುವ ಬಗ್ಗೆ ನಾನು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಅಧ್ಯಕ್ಷರೆ ಅದನ್ನು ಒದಗಿಸುತ್ತೇನೆ.

(ಆ) ಗಂಗಾರಾಮ ಕಟ್ಟಡ ಕುಸಿದ ಪ್ರಕರಣದಲ್ಲಿ ಮೇಲ್ಮನವಿ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, 1983ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ಒಂದು ದುರಂತ ನಡೆಯಿತು. ಗಂಗಾರಾಮ ಕಟ್ಟಡ ಕುಸಿದಿದೆ. ಸುಮಾರು 120 ಜನ ಅಮಾಯಕರ ಹತ್ಯೆಯಾಯಿತು, ಅದು ಒಂದು ರೀತಿಯ ಕೊಲೆಯಾಯಿತು. ಈಗ ಕಳೆದ ವಾರ ಅದಕ್ಕಿಂತ ಒಂದು ದೊಡ್ಡ ದುರಂತ ನಡೆದಿದೆ. ಎಲ್ಲಾ ಆರೋಪಿಗಳನ್ನು ಖುಲಾಸೆ ಮಾಡಿ ಕೆಳಗಿನ ಹಂತದ ಒಂದು ಕೋರ್ಟು ತೀರ್ಪು ಕೊಟ್ಟಿದೆ. ಹಿಂದೆ 1983ನೇ ಇಸವಿಯಲ್ಲಿ ಅವರದೇ ಸರ್ಕಾರ ಇತ್ತು, ಅವರು ಒಂದು ದೇಸಾಯಿ ಆಯೋಗವನ್ನು ನೇಮಿಸಿದ್ದರು. ಕಂಟ್ರಾಕ್ಟರ್ಸ್‌ಗಳನ್ನು, ಆರ್ಕಿಟೆಕ್ಟ್‌ಗಳನ್ನು, ಇಂಜನಿಯರ್ಸ್‌ಗಳನ್ನು, ಬಿಲ್ಡರ್ಸ್‌ಗಳನ್ನು ಆ ಕಮಿಟಿ ರಿಪೋರ್ಟಿನಲ್ಲಿ ಸೇರಿಸಿದ್ದಾರೆ. 120 ಜನರ ಬಲಿ ತೆಗೆದುಕೊಂಡಂಥ ಈ ಕಳಪೆ ಕಾಮಗಾರಿಗೆ ಅನುಮತಿ ಕೊಟ್ಟಿದ್ದು ಒಂದು ಕ್ರಿಮಿನಲ್ ಸೆಗ್ಲಿಜೆನ್ಸಿ ಎಂದು ಹೇಳಿದರೆ ತಪ್ಪಾಗಲಾರದು. ಆ ಎಲ್ಲಾ ಪ್ರಕರಣಗಳ ಬಗ್ಗೆ ಒಂದು ಕಮಿಟಿಯ ತೀರ್ಪು ಇದ್ದರೂ ಕೂಡ ಕೆಳಗಿನ ಹಂತದ ನ್ಯಾಯಾಲಯ ಈ ರೀತಿ ಖುಲಾಸೆ ಮಾಡಿರುತ್ತದೆ. ಅದರ ಬಗ್ಗೆ ಅಪೀಲು ಹೋಗುವುದರ ಬಗ್ಗೆಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಗಂಗಾರಾಮ ಕಟ್ಟಡದ ಬಗ್ಗೆ ನಾನೂ ಕೂಡ ಪ್ರಸ್ತಾಪ ಮಾಡಬೇಕೆಂದಿದ್ದೆ, ಆದರೆ ಈಗಾಗಲೇ ಅವರು ಪ್ರಸ್ತಾಪ ಮಾಡಿದ್ದಾರೆ. ತಾವು ಉತ್ತರ ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ : ನ್ಯಾಯಾಲಯದಲ್ಲಿ ಯಾವ ಕಾರಣದಿಂದ ತೀರ್ಪು ಆಗಿದೆ, ಸರಿಯಾದಂಥ ಮಾಹಿತಿ ಅಥವಾ, ಎವಿಡೆನ್ಸ್ ಇಲ್ಲದೇ ಇರತಕ್ಕಂಥ ಕಾರಣ ಇರಬಹುದು, ಅಥವಾ ಗುಣಾವುಗುಣಗಳ ಬಗ್ಗೆ ಪರಾಮರ್ಶಿಸಿ ತೀರ್ಪನ್ನು ಕೊಟ್ಟಿರಬಹುದು, ನಾವು ಖಂಡಿತವಾಗಿ ಈ ಗಂಭೀರವಾದ ವಿಷಯದ ಹಿನ್ನೆಲೆಯಲ್ಲಿ ನಾನು ಕಾನೂನು ಸಚಿವರ ಗಮನಕ್ಕೆ ಅದನ್ನು ತಂದು ಅಡ್ವೊಕೇಟ್ ಜನರಲ್ ಕಡೆಯಿಂದ ಪರಿಶೀಲಿಸಿ ಅದನ್ನು ಮೇಲ್ಮನವಿ ಮಾಡುವುದಕ್ಕೆ ಏನೇನು ಸಾಧ್ಯತ ಇದೆ ಅದನ್ನು ಪರೀಕ್ಷೆ ಮಾಡಿ ನಿರ್ಧಾರವನ್ನು ಸರ್ಕಾರ ಖಂಡಿತ ತೆಗೆದುಕೊಳ್ಳುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಹೋಗಲೇಬೇಕು. ಏಕೆಂದರೆ ಮಾನ್ಯ ಅಧ್ಯಕ್ಷರೇ, ಇವರು ಹೀಗೆ ಬಿಟ್ಟರೆ ಆಗುವುದಿಲ್ಲ. ಏಕೆಂದರೆ ಗೊತ್ತಿದ್ದು ಬಿಡುವುದು ಸರಿಯಲ್ಲ. ಏಕೆಂದರೆ ಅಲ್ಲಿ ಆರ್ಕಿಟೆಕ್ಟ್ ಇದ್ದಾರೆ, ಇಂಜಿನಿಯರ್ಸ್ ಇದ್ದಾರೆ, ಕೆಲವು ಸಲ ಕೆಳಗಿನ ಕೋರ್ಟ್‌ನಲ್ಲಿ ಅನೇಕ ಲೋಪದೋಷಗಳು ಆಗುತ್ತಿರುತ್ತವೆ. ಹೀಗಿಲ್ಲದಿದ್ದರೆ ಅಪೀಲೇ ಹೈಕೋರ್ಟ್‌ನಲ್ಲಿ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಇರುತ್ತಿರಲಿಲ್ಲ. ಯಾವಾಗ ನಮಗೆ ಲಿವೆನ್ಯೂಸ್ ಎಂದು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಇದೆ ಈ ಎಲ್ಲಾ ಆಪರ್ಚ್ಯುನಿಟೀಸ್ ಕಳೆದ ಮೇಲೆ ಬೇಕಾದರೆ ಇನ್ನು ಮುಂದೆ ಹೋಗುವುದು ಬೇಡ, ಏಕೆಂದರೆ ಸರ್ವೋಚ್ಚ ನ್ಯಾಯಾಲಯದ ತೀರ್ಪಾಗಿದೆ, ಸಾಕು, ಇನ್ನು ಮುಂದೆ ಹೋಗುವುದು ಬೇಡವೆಂದರೆ ಅದಕ್ಕೆ ಒಪ್ಪಬಹುದು. ಆದರೆ ಕೆಲವು ಸಲ ತಪ್ಪು ನಿರ್ಣಯಗಳನ್ನು ಕೋರ್ಟ್‌ನಲ್ಲಿ ಹಾಕುತ್ತಾರೆ, ಆ ರೀತಿ ಆಗುವುದಿಲ್ಲವೆಂದೇನೂ ಇಲ್ಲ. ಅದಕ್ಕಾಗಿ ಇದು ಯಾವುದೇ ಸ್ಥಿತಿಯಲ್ಲಿ ಹೋಗತಕ್ಕಂಥ ಕೇಸ್ ಇದೆಯಾದ್ದರಿಂದ ದಯವಿಟ್ಟು ತಾವು ತಮ್ಮಲಾ ಡಿಪಾರ್ಟ್‌ಮೆಂಟಿನವರು ಅಡ್ವೊಕೇಟ್ ಜನರಲ್‌ರವರಿಗೆ ಹೇಳಿ ಅಪೀಲ್ ಹಾಕಬೇಕೆಂದು ಒತ್ತಾಯ ಮಾಡುವುದು ಸೂಕ್ತವೆಂದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಎಂ. ಪಿ. ಪ್ರಕಾಶ್ : ವಿಷಯದ ಗಂಭೀರತೆ ಇಡೀ ಸದನಕ್ಕೆ ಗೊತ್ತಿರುವಂಥದ್ದು. ಆದುದರಿಂದ Nobody, specially the Courts are not infallible. ಅದು ಇದ್ದೇ ಇರುತ್ತದೆ. ಆದರೆ ತೀರ್ಮಾನ ಬಂದಿರತಕ್ಕಂಥದ್ದು `not on sufficient evidence' ಅಥವಾ ಮೆರಿಟ್‌ನ ಮೇಲೆ ನಿರ್ಣಯ ಮಾಡಿದ್ದಾರೋ ಎಂಬ ಬಗ್ಗೆ ಸ್ವಲ್ಪ ಎಗ್ಸಾಮಿನ್ ಮಾಡಬೇಕಾಗುತ್ತದೆ. ಅದನ್ನು ನಾವು ಪರೀಕ್ಷೆ ಮಾಡುತ್ತೇವೆ. ಖಂಡಿತವಾಗಿ ತಮ್ಮ ಮನಸ್ಸಿನ ಪ್ರಕಾರ ಮೇಲ್ಮನವಿ ಮಾಡಿಕೊಳ್ಳುವುದಕ್ಕೆ ಏನೇನು ಸಾಧ್ಯತೆಗಳಿವೆಯೋ ಅವೆಲ್ಲವನ್ನು ನಾವು ಮಾಡುತ್ತೇವೆ.

(೫) ಹೊಸನಗರ ಮತ್ತು ತೀರ್ಥಹಳ್ಳಿಗಳಿಗೆ ವಿದ್ಯುತ್ ಸಂಪರ್ಕದ ಕಾರ್ಯಗಳು ಪೂರ್ಣವಾಗಿಲ್ಲದಿರುವುದು.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರ 2 ವರ್ಷಗಳ ಹಿಂದೆ ತೀರ್ಥಹಳ್ಳಿ ಕ್ಷೇತ್ರದ 232 ಹಳ್ಳಿಗಳಿಗೆ ಮತ್ತು ಹೊಸನಗರ ತಾಲ್ಲೂಕಿನ 100 ಹಳ್ಳಿಗಳಿಗೆ ಅಂದರೆ ಮಜರೆ ಹಳ್ಳಿಗಳಿಗೆ ವಿದ್ಯುತ್ ಸಂಪರ್ಕವನ್ನು ಒದಗಿಸಿಕೊಡಲು ಸಾಲದ ರೂಪದಲ್ಲಿ ಹೊಸನಗರಕ್ಕೆ ಒಂದು ಕೋಟಿ ರೂ.ಗಳನ್ನು ಮತ್ತು ತೀರ್ಥಹಳ್ಳಿಗೆ ಒಂದು ಕೋಟಿ 97 ಲಕ್ಷ ರೂ.ಗಳನ್ನು 2 ವರ್ಷದ